

ಕಳೆದ ಇಪ್ಪತ್ತು ವರ್ಷಗಳಿಂದ ಕಂಪನಿಯ ಪ್ರತಿಷ್ಠೆಗೆ ಯಾವ ಕುಂದು ಬರದಂತೆ ಪ್ರಾಮಾಣಿಕವಾಗಿ ದುಡಿಯುತ್ತಿದ್ದ ತನ್ನನ್ನು 'ಯಾರು ನೀನು?' ಎಂದು ಕಂಪನಿಯ ಮುಖ್ಯಸ್ಥರಾದ ಕೇಶವರಾವ ಸಾಳುಂಕೆ ಕೇಳಿದ ಪ್ರಶ್ನೆ ಭೂತಾಕಾರದಂತೆ ಬೆಳೆದು ಕೂತಲ್ಲಿ ನಿಂತಲ್ಲಿ ಬೆನ್ನು ಬಿಡದ ಬೇತಾಳದಂತೆ ಕಾಡತೊಡಗಿದಾಗ ಪ್ರೇಮಚಂದ ಗಲಗಲಿಗೆ ತನ್ನ ಅಸ್ತಿತ್ವವೇ ಎದುರು ನಿಂತು ಅಣಕಿಸಿದಂತಾಯಿತು. ಅದೇ ಪ್ರಶ್ನೆಯನ್ನು ತಲೆಯಲ್ಲಿ ಹೊತ್ತು ಆಫೀಸಿನಿಂದ ಮನೆಗೆ ಬಂದವನು ಹೆಂಡತಿ ಮಾಡಿಕೊಟ್ಟ ಚಹಾ ಕೂಡ ಕುಡಿಯಲು ಪುರುಸೊತ್ತು ಇಲ್ಲದವನಂತೆ ಮಲಗುವ ಕೋಣೆಯೊಳಗೆ ಹೋಗಿ ಧಡಾರನೇ ಬಾಗಿಲು ಮುಚ್ಚಿದವನು ಅಲ್ಮೈರಾದ ಎದುರಿನ ಒಂದು ಭಾಗದಲ್ಲಿದ್ದ ಆಳೆತ್ತರದ ನಿಲುವುಗನ್ನಡಿಯ ಎದುರು ನಿಂತು ತನ್ನ ಮುಖವನ್ನೇ ದಿಟ್ಟಿಸಿ ನೋಡತೊಡಗಿದ. ನಿರ್ಲಿಪ್ತತೆಯೇ ಹಾಸಿಗೆ ಹಾಸಿಕೊಂಡು ಮಲಗಿದೆಯೇನೋ ಎನ್ನುವಷ್ಟು ಸಪ್ಪೆಯಾಗಿದ್ದ ಮುಖ, ಕಂಪ್ಯೂಟರಿನ ಪರದೆಯ ಮೇಲೆ ಕಣ್ಣು ಕೀಲಿಸಿ ದೃಷ್ಟಿ ಮಂದವಾದ ಕಣ್ಣುಗಳಿಗೆ ಬೆಳಕು ನೀಡಲೆಂಬಂತೆ ಅರ್ಧಮುಖವನ್ನಾವರಿಸಿದ್ದ ದಪ್ಪ ಗಾಜಿನ ಕನ್ನಡಕ, ಕನ್ನಡಕದ ಒಳಗಿಂದ ಕಾಣುತ್ತಿದ್ದ ನಿರ್ಭಾವುಕ ಕಣ್ಣುಗಳು, ಬೆಂದ ಆಲೂಗಡ್ಡೆಯಂಥ ಮೂಗು ಯಾವ ಕೋನದಿಂದ ನೋಡಿದರೂ ತನ್ನದು ನೆನಪಿನಲ್ಲಿಟ್ಟುಕೊಳ್ಳಬಹುದಾದ ಚಹರೆ ಅಲ್ಲವೆನಿಸಿ ಪ್ರೇಮಚಂದ ಒಂದುಕ್ಷಣ ಅಧೀರನಾದ.

ತನ್ನ ಇದುವರೆಗಿನ ಐವತ್ತು ವರ್ಷಗಳ ಆಯುಷ್ಯದಲ್ಲಿ ತನ್ನ ಮುಖದ ಚಹರೆಯ ಬಗ್ಗೆ ಮೂಡದೇ ಇದ್ದ ಜಿಗುಪ್ಸೆ ಈಗ ತನ್ನಲ್ಲಿ ಮೂಡುತ್ತಿರುವ ಬಗೆಗೆ ಮತ್ತು ಆ ಜಿಗುಪ್ಸೆಯೇ ಹೆಮ್ಮರವಾಗಿ ಬೆಳೆದು ತನ್ನನ್ನೆಲ್ಲಿ ನುಂಗಿಬಿಡುತ್ತದೆಯೋ ಎನ್ನುವ ಆತಂಕ ಮನಸ್ಸಿನಲ್ಲಿ ಮೂಡಿದ್ದೇ ಪ್ರೇಮಚಂದ ಎದುರಿನ ನಿಲುವುಗನ್ನಡಿಯಲ್ಲಿ ಕಾಣುತ್ತಿದ್ದ ತನ್ನ ಪ್ರತಿಬಿಂಬದ ಮೇಲಿನ ದೃಷ್ಟಿಯನ್ನು ಸರಕ್ಕನೆ ಬದಲಿಸಿ ಕೋಣೆಯಿಂದ ಹೊರಬಂದ. ಕೋಣೆಯ ಹೊರಗೆ ಚಹಾದ ಕಪ್ಪು ಕೈಯಲ್ಲಿ ಹಿಡಿದು ನಿಂತಿದ್ದ ಸರಳಾಬಾಯಿಗೆ ತನ್ನ ಗಂಡನ ಇವತ್ತಿನ ವರ್ತನೆ ವಿಚಿತ್ರವಾಗಿ ಕಾಣಿಸಿತು. ಆ ರಾತ್ರಿ ಊಟ ಸೇರದೆ, ನಿದ್ದೆ ಹತ್ತಿರ ಸುಳಿಯದೆ ಇಡೀ ರಾತ್ರಿ ಪ್ರೇಮಚಂದನ ಮನಸ್ಸು ಒಂದುರೀತಿ ಕ್ಷೋಭೆಯಿಂದ ನರಳಿತು.

ನಡೆದದ್ದಿಷ್ಟು. ವರ್ಷಕ್ಕೆ ನಾಲ್ಕಾರು ಬಾರಿ ಕಂಪನಿಯ ಬ್ರ್ಯಾಂಚ್ ಆಫೀಸಿಗೆ ಭೇಟಿ ನೀಡುವ ಮುಖ್ಯಸ್ಥ ಕೇಶವರಾವ ಸಾಳುಂಕೆ ವಾಡಿಕೆಯಂತೆ ಈ ಸಲವೂ ಪ್ರೇಮಚಂದ ಕೆಲಸ ಮಾಡುವ ಬ್ರ್ಯಾಂಚಾಫೀಸಿಗೆ ಭೇಟಿ ನೀಡಿದ್ದರು. ಹೀಗೆ ಭೇಟಿ ನೀಡುವ ಪ್ರತಿಸಂದರ್ಭ ಕಚೇರಿಯ ಎಲ್ಲ ಸಿಬ್ಬಂದಿಯನ್ನು ಪರಿಚಯಿಸಿಕೊಂಡು